ಶ್ರೀ ಕೆ. ಪಿ. ಚಿಕ್ಕೇಗೌಡ.- ಅದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಹಾಗೆ ಭರವಸೆ ಕೊಡುವುದಕ್ಕಾಗುವುದಿಲ್ಲ. ಹಣ ಒದಗಿದಂತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

Installation of I.P. sets

582. Sri C. R. RANGE GOWDA (Magadi).—

Will the Chief Minister be pleased to state :—

(*a*) the number of Irrigation Pump sets installed in the village of Hosadoddi, Madbal Hobli of Magadi Taluk;

(*b*) whether the completion certificate in respect of those Irrigation Pump sets has been issued ;

(*c*) if so, when ;

(*d*) what are the bottlenecks to give power line to that village ?

Sri D. PARAMESHWARAPPA (Deputy Minister for Major Irrigation) [On behalf of SRI VEERENDRA PATIL (Chief Minister)].—

(*a*) 4.

(*b*) Completion reports have been received from the parties.

(*c*) On 10th November 1968.

(*d*) The completion reports received were found to be wrong as interior wiring was not actually completed. Besides, the parties have not carried out the departmental formalities like execution of agreement, etc.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನ ಹೊಸ ದೊಡ್ಡಿಗೆ ಎಲೆಕ್ಟ್ರಿಕ್ ಲೈನ್ ಕೊಡುವ ಬಗ್ಗೆ ಸ್ಥಳೀಯ ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಯ ನೇತೃತ್ವದಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಿದರೂ ಕೂಡ ಅವರಿಗೆ ಮನದಟ್ಟು ಆದರೂ ಕೂಡ ಇನ್ನರ್ ವೈರಿಂಗ್ ಮಾಡಿಲ್ಲ ಮತ್ತು ಅಗ್ರಿಮೆಂಟ್ ಎಕ್ಸಿಕ್ಯೂಟ್ ಮಾಡಿಲ್ಲ ಎಂದು ಹೇಳಿ ತಕರಾರು ಹಾಕಿದ್ದಾರೆ. ಆದ್ದರಿಂದ ಸ್ಥಳ ಪರಿಶೀಲನೆ ಮಾಡಿ ಜಾಗ್ರತೆ ಎಲೆಕ್ಟ್ರಿಕ್ ಲೈನ್ ಕೊಡಿಸುವುದಕ್ಕೆ ತಿಳಿಸುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಇದುವರೆಗೂ ಅಂತಹ ದೂರು ಬಂದಿಲ್ಲ, ಬಹುಶಃ ಅಧೀನರುಗಳ ನ್ಯೂನತೆಯಿಂದ ಹೀಗೆ ಆಗುತ್ತದೆ ಎಂಬುದು ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಈಗ ಹೇಳುತ್ತಾ ಇದ್ದಾರೆ, ಅದಷ್ಟು ಜಾಗ್ರತೆ ಸ್ಥಳ ಪರಿಶೀಲನೆ ಮಾಡಿ ಅವರು ಹೇಳುವುದು ನಿಜವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ—ಎಲೆಕ್ಟ್ರಿಕ್ ಪಂಪ್ ಸೆಟ್‌ನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ನವರು ಕೊಟ್ಟು ಐದು ವರ್ಷವಾಯಿತು ಯಾವ ಕೆಲಸವೂ ಆಗಿಲ್ಲ. ಅವರು ಹಣ ವಾಪಸು ಪಾವತಿ ಮಾಡಬೇಕೆಂದು ಕೇಳುತ್ತಾ ಇದ್ದಾರೆ, ಉತ್ತರವನ್ನು ಇಲ್ಲದೇ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಜಾಗ್ರತೆ ಅಲ್ಲಿ ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಪರಮೇಶ್ವರಪ್ಪ.—ಡಿಪಾರ್ಟ್‌ಮೆಂಟಿನವರು ವಿದ್ಯುತ್‌ನ್ನು ಸಪ್ಲೈ ಮಾಡುವುದಕ್ಕೆ ಮುಂಚೆ ಪಾರ್ಟಿಸ್ ಕಂಪ್ಲೀಷನ್ ರಿಪೋರ್ಟ್ ಕೊಡಬೇಕು ಮತ್ತು ಅಗ್ರಿಮೆಂಟ್ ಕೂಡ ಬರೆದು ಕೊಡಬೇಕೆಂದು ನಿಯಮಗಳು ಇವೆ. ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದೇವೆ ಅಂದಮೇಲೆ ಇನ್ನರ್

ವೈರಿಂಗ್ ಆಗಿಲ್ಲ ಮತ್ತು ಮುಚ್ಚಳಿಕೆ ಬರೆದು ಕೊಟ್ಟಿಲ್ಲ ಎಂದು ವರದಿ ಬಂದಿದೆ. ಆ ರೀತಿ ತಮ್ಮ ಭಾಗದ ಕೆಲಸ ಕಂಪ್ಲೀಷನ್ ರಿಪೋರ್ಟ್ ಮತ್ತು ಮುಚ್ಚಳಿಕೆ ಬರೆದು ಕೊಟ್ಟು ವಿದ್ಯುತ್ ಸರಬರಾಯಿ ಇಲ್ಲದೇ ಹೋದ ಪಕ್ಷದಲ್ಲಿ ಬಹುಶಃ ತಕ್ಷಣ ಏರ್ಪಾಡು ಮಾಡಬಹುದು.

Missing of an Idol in a Temple

610. Sri K. M. THAMMAIAH (Kadur).—

Will the Minister for Revenue be pleased to state :—

(*a*) whether it has come to the notice of the Government that an idol is missing from the Temple of Sri Channakeshavaswamy in Banavar of Arasikere Taluk in Hassan District since one and a half years :

(*b*) if so, the action taken to trace the idol and restore it to the temple ;

(*c*) the action taken to replace the idol by a new one if the Old one is not traced or traceable ?

Sri H. V. KOUJALGI (Minister for Revenue).—

(*a*) No.

(*b*) and (*c*) Will be considred on receipt of a report from the Endowment Commissioner, which has been called for.

ಶ್ರೀ ಕೆ. ಎಂ. ತಮ್ಮಯ್ಯ.—ಕೆಳಗಿನ ಅಧಿಕಾರಿಗಳಿಂದ ಮಾಹಿತಿ ಬಂದಿಲ್ಲ ಎಂದು ಹೇಳಿದ್ದೀರಿ, ಪರಿಶೀಲನೆಯಾಗುತ್ತದೆ ಎಂದು ಹೇಳಿದ್ದೀರಿ. ಪರಿಶೀಲನೆ ಮಾಡಿ ವಿಗ್ರಹ ಪತ್ತೆ ಹಚ್ಚುವುದಕ್ಕೆ ಅಗತ್ಯೇ ಇರುವುದರಿಂದ ಸದ್ಯಕ್ಕೆ ಒಂದು ಹೊಸ ಪ್ರತಿಮೆಯನ್ನು ಅಲ್ಲಿ ಪ್ರತಿಷ್ಠೆ ಮಾಡಿ. ಈ ಬಗ್ಗೆ ಅಲ್ಲಿನ ಸ್ಥಳೀಯ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದ್ದಾರೆ. ಅಲ್ಲಿಗೆ ವಿಗ್ರಹ ಕಳೆದು ಹೋಗಿದೆ ಎಂಬ ಮಾತು ಇಪತ್ತಿನವರೆಗೂ ಗೊತ್ತಿರಲಿಲ್ಲ. ಈ ಪ್ರಶ್ನೆ ಹಾಕಿದನಂತರ ನಮ್ಮ ಅಧಿಕಾರಿಗಳಿಗೆ ಪುನಃ ಚಾಲಕಸಿ ಮಾಡುವುದಕ್ಕೆ ವಹಿಸಿದ್ದೇವೆ, ಅದು ಹೋಗಿದೆ ಅಂತ ಕಂಡುಬಂದರೆ ಪುನಃ ಪರಿಶೀಲನೆ ಮಾಡುತ್ತೇವೆ.

New Syllabus for the Secondary Education

638. Sri L. SRIKANTAIAH (Nanjangud).—

Will the Minister for Education be pleased to state :—

(*a*) whether Government is introducing a new syllabus of studies for the Secondary Schools of the State and if so, from which year ;

(*b*) whether this syllabus differs from existing scheme of studies (copy of the existing scheme of studies and the and the new syllabus may be placed on the Table of the House) ;

(*c*) the duration of study in the Secondary Schools under this new syllabus ;